ಈಗ ಟ್ರೆಂಡ್ ಆಗುತ್ತಿದೆ. ಸೊಂಟದವರೆಗೂ ಚಾಚಿಕೊಳ್ಳುವ ಈ ರವಿಕೆ ವನಿತೆಯರ ವಾರ್ಡ್‌ರೋಬ್‌ಗಳನ್ನು ನಿಧಾನವಾಗಿ ಆಕ್ರಮಿಸಿಕೊಳ್ಳುತ್ತಿದೆ. ಸೀರೆ ಉಟ್ಟಾಗ ಸೊಂಟ ಕಾಣಬೇಕು ಎನ್ನುವ ಅಲಿಖಿತ ನಿಯಮವನ್ನು ಮೀರಿ ಕೋರ್ಸೆಟ್ ಹೆಣ್ಣುಮಕ್ಕಳ ಫೇವರೆಟ್ ಆಗುತ್ತಿದೆ.

'ಬಹುತೇಕರಿಗೆ ಸೀರೆ ಉಟ್ಟಾಗ ಸೊಂಟ ಕಾಣಿಸಿಕೊಳ್ಳುವ ಇಚ್ಛೆ ಇರುವುದಿಲ್ಲ. ಆಗ ಮಾಮೂಲಿ ರವಿಕೆ ತೊಟ್ಟು ಸೀರೆಯನ್ನು ಪದೇ ಪದೇ ಸೊಂಟದ ಬಳಿ ಒಯ್ದು ಸೊಂಟದ ಭಾಗವನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ. ಅಂತಹವರಿಗೆ ಕೋರ್ಸೆಟ್ ರವಿಕೆ ವರವಾಗಿದೆ. ಫ್ಯಾಷನಬಲ್ ಆಗಿ ಕಾಣುವ, ಗ್ಲಾಮರಸ್ ಲುಕ್ ನೀಡುವ ಈ ರವಿಕೆಗಳನ್ನು ಯುವತಿಯರು ವಿಶ್ವಾಸದಿಂದ ತೊಡಬಹುದು' ಎನ್ನುತ್ತಾರೆ ವಸ್ತ್ರ ವಿನ್ಯಾಸಕಿ ಚೈತನ್ಯಾ ಭಟ್.

ಈ ಹಿಂದೆ ಬಾಲಿವುಡ್ ನಟಿಯರಾದ ಶಿಲ್ಪಾ ಶೆಟ್ಟಿ, ಮಾಧುರಿ ದೀಕ್ಷಿತ್, ಮಲೈಕಾ ಅರೋರ, ಸೋನಂ ಕಪೂರ್, ದೀಪಿಕಾ ಪಡುಕೋಣೆ ಮೊದಲಾದವರು ಖಾಸಗಿ ಕಾರ್ಯಕ್ರಮಗಳಲ್ಲಿ ಕೋರ್ಸೆಟ್ ರವಿಕೆ, ಸೀರೆ ಉಟ್ಟು ಗಮನಸೆಳೆದಿದ್ದರು. ಆ ಬಳಿಕ ಈ ರವಿಕೆ ಹೆಚ್ಚು ಪ್ರಚಾರಕ್ಕೆ ಬಂದಿದೆ. ಫ್ಯಾಷನ್ ಶೋಗಳಲ್ಲಿ ರೂಪದರ್ಶಿಯರೂ ಸೀರೆಗೆ ಕೋರ್ಸೆಟ್ ರವಿಕೆ ತೊಟ್ಟು ಬೀಗಿದ್ದಾರೆ.

ಕಾಂಜೀವರಂ, ಬನಾರಸ್‌ನಂತಹ ಸಾಂಪ್ರದಾಯಿಕ ಸೀರೆಗೂ ಕೋರ್ಸೆಟ್ ರವಿಕೆ ತೊಡುವುದು ಈಗ ಟ್ರೆಂಡ್ ಆಗುತ್ತಿದೆ. ಜತೆಗೆ ಫ್ಯಾನ್ಸಿ ಸೀರೆ, ರೇಷ್ಮೆ ಸೀರೆ, ಕಸೂತಿ, ಕೈಮಗ್ಗದ ಸೀರೆಗಳಿಗೂ ಈ ರವಿಕೆ ಹೊಂದಿಕೆಯಾಗುತ್ತವೆ. ತುಂಬು ತೋಳಿನ, ಹೈನೆಕ್ ಹಾಗೂ ಸ್ಲೀವ್ ಲೆಸ್ ಕೋರ್ಸೆಟ್ ರವಿಕೆಗಳು ಫ್ಯಾನ್ಸಿ ಸೀರೆಗಳಿಗೆ ಅತ್ಯುತ್ತಮ ಆಯ್ಕೆ.

ಲೆಹೆಂಗಾ, ಮ್ಯಾಕ್ಸಿ ಸ್ಕರ್ಟ್, ಪ್ಯಾಂಟ್ ಸೀರೆ ಹಾಗೂ ಡೆನಿಮ್ ಜೀನ್ಸ್‌ಗಳಿಗೂ ಈ ರವಿಕೆ ಅಥವಾ ಕೋರ್ಸೆಟ್ ಟಾಪ್ ತೊಟ್ಟುಕೊಳ್ಳಬಹುದು. ಹೊಸ ವಿನ್ಯಾಸ ಹಾಗೂ ನವೀನ ಶೈಲಿಯ ವಸ್ತ್ರ ಪ್ರಿಯರಿಗೆ ಈ ಡ್ರೆಸ್ ಮೆಚ್ಚಿನ ಆಯ್ಕೆಯಾಗುವುರಲ್ಲಿ ಎರಡು ಮಾತಿಲ್ಲ.



## ಕೋರ್ಸೆಟ್‌ಗೂ ಉಂಟು ಇತಿಹಾಸ

ಕೋರ್ಸೆಟ್ ಉಡುಪಿನ ಪರಿಕಲ್ಪನೆ ಇಂದು ನಿನ್ನೆಯದ್ದಲ್ಲ. ಈ ಶತಮಾನದ್ದೂ ಅಲ್ಲ. ಈ ಉಡುಪಿನ ಇತಿಹಾಸ ಕೆದಕಿದರೆ 14ನೇ ಶತಮಾನಕ್ಕೆ ಕೊಂಡೊಯ್ಯುತ್ತದೆ. 14ನೇ ಶತಮಾನದ ಉತ್ತರಾರ್ಧದಲ್ಲಿ ಕೋರ್ಸೆಟ್ ಉಡುಪುಗಳು ಬಳಕೆಯಲ್ಲಿದ್ದವು. ಮಹಿಳೆಯರು ಸೊಂಟಕ್ಕೆ ಬಿಗಿಯಾದ ಒಳ ಉಡುಪಾಗಿ ಇದನ್ನು ಧರಿಸುತ್ತಿದ್ದರು. ಒಂದು ರೀತಿಯ ಲೇಸ್ಡ್ ರವಿಕೆಯಾಗಿಯೂ ಇದು ಬಳಕೆಯಲ್ಲಿತ್ತು. 16ನೇ ಶತಮಾನದಿಂದ 20ನೇ ಶತಮಾನದ ಆರಂಭದವರೆಗೆ ಪಾಶ್ಚಿಮಾತ್ಯ ದೇಶಗಳಲ್ಲಿ ಕೋರ್ಸೆಟ್ ಉಡುಪುಗಳು ಬಳಕೆಯಲ್ಲಿದ್ದವು. ಮಹಿಳೆಯರು ಹಾಗೂ ಪುರುಷರು ರಕ್ಷಾ ಕವಚವಾಗಿಯೂ ಅವುಗಳನ್ನು ಧರಿಸುತ್ತಿದ್ದರು.

ದೇಹಕ್ಕೆ ಆಪ್ತವಾಗಿ ಹೊಂದಿಕೊಳ್ಳುವ ರವಿಕೆಯಾಗಿ ಬಳಕೆಯಾಗುತ್ತಿದ್ದ ಈ ಉಡುಪುಗಳು ಕಾಲಾನಂತರ ರಕ್ಷಾ ಕವಚಗಳಾಗಿ ಮಾರ್ಪಟ್ಟವು. ತಿಮಿಂಗಿಲದ ಚರ್ಮ ಹಾಗೂ ಉಕ್ಕಿನಿಂದ ಅವುಗಳನ್ನು ತಯಾರಿಸಲಾಗುತ್ತಿತ್ತು ಎಂದು ಇತಿಹಾದ ಪುಟಗಳು ತಿಳಿಸುತ್ತವೆ. ಮೇಲ್ವರ್ಗದ ಹಾಗೂ ಮಧ್ಯಮ ವರ್ಗದ ಮಹಿಳೆಯರು ಈ ಉಡುಪುಗಳನ್ನು ಆಗ ಹೆಚ್ಚಾಗಿ ಬಳಸುತ್ತಿದ್ದರು.

ಕಾಳಜಿ ವಹಿಸಿ: ಕೋರ್ಸೆಟ್ ಉಡುಪು ಹೆಚ್ಚು ಕುಸರಿ ಕಲೆಯಿಂದ ವಿನ್ಯಾಸಗೊಳಿಸಿದ್ದರೆ ಅದನ್ನು ನಾಜೂಕಿನಿಂದ ನೋಡಿಕೊಳ್ಳಬೇಕಾಗುತ್ತದೆ. ಸ್ವಚ್ಛತೆಗೆ ವಾಷಿಂಗ್ ಮೆಶಿನ್ ಬಳಸದಿರುವುದು ಉತ್ತಮ. ಕೈಯಲ್ಲಿಯೇ ಸ್ವಲ್ಪ ಸಾಬೂನು ಬಳಸಿ ಸೂಕ್ಷ್ಮವಾಗಿ ಉಜ್ಜಿ, ಹಿಂಡದೆ ನೆರಳಿನಲ್ಲಿ ಒಣಗಿಸುವುದು ಉತ್ತಮ. ವಾಡ್‌ರ್ರೋಬ್‌ಗಳಲ್ಲೂ ಪ್ರತ್ಯೇಕ ಜಾಗದಲ್ಲಿರಿಸಿದರೆ ಒಳ್ಳೆಯದು.

ಯಾವ ಬಗೆಯ ಆಭರಣ ಹೊಂದುತ್ತದೆ: ಹೈನೆಕ್ ಕಾರ್ಸೆಟ್ ಉಡುಪು ಧರಿಸಿದ್ದರೆ ಆಭರಣ ಧರಿಸುವ ಅಗತ್ಯವಿರುವುದಿಲ್ಲ. ಆಗ ನಿರಾಭರಣ ಸುಂದರಿಯಾಗಿ ಮಿಂಚಬಹುದು. ಡೀಪ್ ನೆಕ್ ಇದ್ದರೆ ಮುತ್ತಿನ ನೆಕ್ಲೆಸ್ ಒಪ್ಪುತ್ತದೆ. ಉಡುಪು ಅದ್ದೂರಿತನದಿಂದ ಕೂಡಿದ್ದರೆ ಕೊರಳಿಗೆ ಯಾವ ಆಭರಣದ ಅಗತ್ಯವೂ ಇರುವುದಿಲ್ಲ. ಕೇವಲ ಕಿವಿಯೋಲೆ ಧರಿಸಿದರೂ ಸಾಕು. ಇನ್ನು ಉದ್ದ ತೋಳಿನ ಉಡುಪು ನಿಮ್ಮದಾಗಿದ್ದರೆ ಅದ್ದೂರಿತನವಲ್ಲದ ಮಣಿಗಳ ಹಾರವನ್ನು ಧರಿಸಬಹುದು.